ಅಸಲು ದಾವಾ ಸಂಖ್ಯೆ - 303/2019
ಡಿ.ಡಬ್ಲ್ಯೂ - 02
ದಿನಾಂಕಃ 08-11-2024
ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ.ವಿ.ಬಿ.ಟಿ ವಕೀಲರಿಂದಃ**

ಪ್ರತಿವಾದಿ ನಂಬರ 1 ರವರು ಮತ್ತು ನಾನು ಒಂದೇ ಊರಿನವರು ಮತ್ತು ಒಂದೇ ಜಾತಿಯವರು. ದಾವಾ ಆಸ್ತಿಯ ಸರ್ವೇ ನಂಬರ 79/2 ಇರುತ್ತದೆ. ಸದರಿ ದಾವಾ ಆಸ್ತಿಯು 3 ಎಕರೆ 35 ಗುಂಟೆ ವಿಸ್ತೀರ್ಣ ಇರುತ್ತದೆ. ಕಲಿವಾಳ ಊರಿನ ಹದ್ದಿನಲ್ಲಿ ಇರುತ್ತದೆ. ನನ್ನ ಹೆಸರಿನಲ್ಲಿ

ಕಳಕೋಡ ಗ್ರಾಮದಲ್ಲಿರುವ ಸರ್ವೇ ನಂಬರ 35 ರಲ್ಲಿ 2 ಎಕರೆ 38 ಗುಂಟೆ ಜಮೀನು ಇರುತ್ತದೆ. ಕಲಿವಾಳ ಗ್ರಾಮದಲ್ಲಿ ನನ್ನ ಸ್ವಂತ ಜಮೀನು ಇರುವುದಿಲ್ಲ. ದಾವಾ ಆಸ್ತಿಯ ಪೂರ್ವಕ್ಕೆ ಮುಳಗುಂದರವರ ಜಮೀನು ಇದೆ ಎಂದರೆ ಸರಿ. ಪಶ್ಚಿಮಕ್ಕೆ ವಾದಿಯ ಸರ್ವೇ ನಂಬರ 79/1 ಎ ರ ಜಮೀನು ಇದೆ ಎಂದರೆ ಸರಿ. ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಪ್ರತಿವಾದಿಯರ ಜಮೀನು ಇದೆ ಎಂದರೆ ಸರಿ.

ವಾದಿಯ ಮನೆತನದ ಮೂಲ ಪುರುಷನಾದ ಚಂದ್ರಗೌಡ ಪಾಟೀಲ ಮತ್ತು ಅವರ ಹೆಂಡತಿ ಗದಿಗೆವ್ವರವರನ್ನು ನೀವು ನೋಡಿದ್ದೀರಾ ಎಂದರೆ ನೋಡಿರುತ್ತೇನೆ. ಗದಿಗೆವ್ವರವರಿಗೆ ನರಸನಗೌಡ ಪಾಟೀಲ ಮತ್ತು ರುದ್ರಗೌಡ ಪಾಟೀಲ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ಸದರಿ ರುದ್ರಗೌಡ ಪಾಟೀಲ ಮತ್ತು ಅವನ ಹೆಂಡತಿ ನೀಲವ್ವ ಉರ್ಫ ಗೌರವ್ವ ತೀರಿಕೊಂಡಿರುತ್ತಾರೆ ಎಂದರೆ ಸರಿ. ಅವರಿಗೆ ಯಾವುದೇ ಮಕ್ಕಳು ಇರುವುದಿಲ್ಲ ಎಂದರೆ ಸರಿ.

ದಾವಾ ಆಸ್ತಿಯು ರುದ್ರಗೌಡ ಪಾಟೀಲರವರ ಹೆಸರಿನಲ್ಲಿಯೇ ಇದೆ ಎಂದರೆ ನನಗೆ ಮಾಹಿತಿ ಇರುವುದಿಲ್ಲ. ದಾವಾ ಆಸ್ತಿಯು ಯಾರ ಹೆಸರಿನಲ್ಲಿ ಇದೆ ಎಂದು ನಾನು ದಾಖಲೆಗಳನ್ನು ನೋಡಿರುವುದಿಲ್ಲ. ದಾವಾ ಆಸ್ತಿಯು ರುದ್ರಗೌಡ ಮತ್ತು ನರಸನಗೌಡರವರ ಹೆಸರಿಗೆ ದಾಖಲಾಗುವ ಮುನ್ನ 1957 ರಿಂದ 1970 ರ ತನಕ ಅವರ ತಾಯಿಯಾದ ಗದಿಗೆವ್ವರವರ ಹೆಸರಿನಲ್ಲಿ ದಾಖಲಾಗಿತ್ತು ಎಂದರೆ ಸರಿ. 1971 ರಿಂದ ರುದ್ರಗೌಡ ಮತ್ತು ನರಸನಗೌಡರವರ ಹೆಸರು ದಾವಾ ಆಸ್ತಿಯಲ್ಲಿ ದಾಖಲಾಯಿತು ಎಂದರೆ ಸರಿ. ವಾದಿ ಮತ್ತು ಅವನ ತಮ್ಮನಾದ ರುದ್ರಗೌಡರವರು 1983 ರಲ್ಲಿ ಅವರ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಮಾಹಿತಿ ಇರುವುದಿಲ್ಲ.

ದಾವಾ ಆಸ್ತಿಯು ರುದ್ರಗೌಡನ ಹೆಸರಿಗೆ ಯಾವಾಗಿನಿಂದ ದಾಖಲಾಯಿತು ಎಂದರೆ ನನಗೆ ಮಾಹಿತಿ ಇರುವುದಿಲ್ಲ. ಗದಿಗೆವ್ವರವರಿಂದ ನರಸನಗೌಡ ಮತ್ತು ರುದ್ರಗೌಡನ ಹೆಸರಿಗೆ ದಾವಾ ಆಸ್ತಿಯು ಯಾವಾಗ ದಾಖಲಾಯಿತು ಮತ್ತು ರುದ್ರಗೌಡ ಮತ್ತು ನರಸನಗೌಡರವರು ವಿಭಾಗ ಮಾಡಿಕೊಂಡ ಮಾಹಿತಿ ನಿಮಗೆ ತಿಳಿದಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಮಾಹಿತಿ ಇರುವುದಿಲ್ಲ ಎಂದು ನುಡಿದಿರುತ್ತಾರೆ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಗದಿಗೆವ್ವರವರ ಹೆಸರಿನಿಂದ ನರಸನಗೌಡ ಮತ್ತು ರುದ್ರಗೌಡ ಹೆಸರಿಗೆ ಯಾವಾಗ ಖಾತೆ ಆಯಿತು ಎಂದು ನಿಮ್ಮ ಸ್ವಂತಕ್ಕೆ ಮಾಹಿತಿ ಇರುವುದಿಲ್ಲ ಎಂದರೆ ಸರಿ.

ನಿಮ್ಮ ಸಾಕ್ಷ್ಯ ಪ್ರಮಾಣ ಪತ್ರಕ್ಕೆ ಸಹಿ ಮಾಡಿದ್ದನ್ನು ಬಿಟ್ಟು ಬೇರೆ ಯಾವುದೇ ಮಾಹಿತಿ ನಿಮ್ಮ ಸ್ವಂತಕ್ಕೆ ಇರುವುದಿಲ್ಲ ಎಂದರೆ ಸರಿ. ಪ್ರತಿವಾದಿ ನಂಬರ 1 ರವರು ಸಾಕ್ಷಿ ಹೇಳಲು ನಿಮ್ಮನ್ನು ಕರೆದುಕೊಂಡು ಬಂದಿರುವುದಕ್ಕೆ ನೀವು ಬಂದು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿ.

**ಮರು ವಿಚಾರಣೆಃ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು